ದಿನಾಂಕಃ 13.12.2024

ಆರ್ ಎ 43/2024 ಪಿ.ಡಬ್ಲ್ಯೂ: 1

ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲು ಃ ಎದುರುದಾರರ ಪರ ಶ್ರೀ ಜಿ ಕೆ ಪಿ ರವರಿಂದ

1. ನಾನು ಲಾರಿ ಚಲಾಕನಾಗಿ ಕೆಲಸ ಮಾಡುತ್ತೇನೆ. ನನಗೆ ಒಂದು ಸ್ವಂತ ಲಾರಿ ಇರುತ್ತದೆ. ನನಗೆ ಇಂಗ್ಲೀಷ್ ಓದಲು ಮತ್ತು ಬರೆಯಲು ಬರುವುದಿಲ್ಲ. ಸಾಕ್ಷಿಗೆ ಪ್ರಮಾಣ ಪತ್ರವನ್ನು ತೋರಿಸಿ ಇದು ಇಂಗ್ಲೀಷ್ ನಲ್ಲಿ ಬರೆದಿದೆ ಹಾಗಾಗಿ ಅದರಲ್ಲಿ ಏನು ಬರೆದಿದೆ ಎಂದು ನಿಮಗೇನೂ ಗೊತ್ತಿಲ್ಲ ಎಂದರೆ ಸಾಕ್ಷಿ ಇಲ್ಲ ಎಂದುಉತ್ತರಿಸುತ್ತಾರೆ. ನೀವು ಸಲ್ಲಿಸಿರುವ ಅಪೀಲಿನಲ್ಲಿ ಏನು ವಿಚಾರಗಳನ್ನು ಹೇಳಲಾಗಿದೆ , ಅವೆಲ್ಲಾ ಸತ್ಯವಿದೆಯಾ ಎಂದರೆ ಸಾಕ್ಷಿ ಹೌದು ಸತ್ಯವಾಗಿದೆ ಎಂದುಉತ್ತರಿಸುತ್ತಾರೆ. ಅಪೀಲು ಮೆಮೋ ದಲ್ಲಿ ನಮೂದಿಸಿರುವ ಈಗ ಓದಿ ಹೇಳಿದ ನಿಮ್ಮ ವಿಳಾಸ ಸರಿಯಾಗಿದೆಯಾ ಎಂದರೆ ಸಾಕ್ಷಿ ಹೌದು ಎಂದು ಉತ್ತರಿಸುತ್ತಾರೆ. ಸದರಿ ವಿಳಾಸದಲ್ಲಿ ನಾನು ಹುಟ್ಟಿದ್ದಾಗಿನಿಂದಲೂ ಇದ್ದೆನು. ನಮ್ಮ ಮನೆಯಲ್ಲಿ ನನ್ನ ತಂದೆ ತಾಯಿ , ನಾನು ಹಾಗೂ ನನ್ನ ಹೆಂಡತಿ ವಾಸವಾಗಿದ್ದೇವೆ. ನಾನು ಪ್ರತಿನಿತ್ಯ ನನ್ನ ವ್ಯವಹಾರಗಳನ್ನು ಮುಗಿಸಿಕೊಂಡು ಅದೇ ವಿಳಾಸಕ್ಕೆ ಹೋಗುತ್ತೇನೆ ಎಂದರೆ ಸರಿ. ಯಾವುದೇ ಪತ್ರ, ನೋಟೀಸ್ ಮತ್ತು ವ್ಯವಹಾರಕ್ಕೆ ಸಂಬಂದಪಟ್ಟಂತೆ ಯಾವುದೇ ಪತ್ರಗಳು ಅದೇ ವಿಳಾಸಕ್ಕೆ ಬರುತ್ತವೆ ಎಂದರೆ ಸರಿ. ಸದರಿ ವಿಳಾಸಕ್ಕೆ ಯಾವುದೇ ನೋಟೀಸ್ ಗಳು ಬಂದರೆ ನಿಮ್ಮ ಗಮನಕ್ಕೆ ಬರುತ್ತದೆ ಎಂದರೆ ಸಾಕ್ಷಿ ಬರುತ್ತದೆ ಎಂದು ಉತ್ತರಿಸುತ್ತಾರೆ.

2. ಈ ಮೇಲ್ಮನವಿಗೆ ಎದುರುದಾರರಾದ ಮನೋಜ್ ಕುಮಾರ್ ತಕರಾರು ಸಲ್ಲಿಸಿದ್ದಾರೆ, ಅದರಲ್ಲಿ ಏನು ಬರೆಸಿದ್ದಾರೆ ಎಂದು ಓದಿ ತಿಳಿದುಕೊಂಡಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎಂದುಉತ್ತರಿಸುತ್ತಾರೆ. ಮನೋಜ್ ಕುಮಾರ್ ನಿಮಗೆ ಎಷ್ಟು ವರ್ಷಗಳಿಂದ ಪರಿಚಯ ಎಂದರೆ ಸಾಕ್ಷಿ ನನಗೆ ಅವರ ಪರಿಚಯವೇ ಇಲ್ಲ ಎಂದು ಉತ್ತರಿಸುತ್ತಾರೆ. ಮನೋಜ್

ಕುಮಾರ್ ಎಂಬ ವ್ಯಕ್ತಿ ನಿಮಗೆ ಎಷ್ಟು ವರ್ಷಗಳಿಂದ ಗೊತ್ತು ಎಂದರೆ ಸಾಕ್ಷಿ ನನಗೆ ಅವರು ಗೊತ್ತೇ ಇಲ್ಲ ಎಂದು ಉತ್ತರಿಸುತ್ತಾರೆ.

3. ನೀವು ಈ ಅಪೀಲನ್ನು ಯಾವ ಕಾರಣಕ್ಕೆ ಸಲ್ಲಿಸಿದ್ದೀರಿ ಎಂದರೆ ಸಾಕ್ಷಿ ಪೋಲೀಸರು ಮನೆಯ ಬಳಿ ಬಂದು ನಿಮ್ಮ ಮನೆಯ ಸಾಮಾನುಗಳನ್ನು ಆಚೆ ಹಾಕುತ್ತೇವೆ ಎಂದು ಹೇಳಿದಾಗ ನನಗೆ ಈ ಕೇಸ್ ವಿಚಾರವಾಗಿ ಗೊತ್ತಾಯಿತು ಎಂದು ಉತ್ತರಿಸುತ್ತಾರೆ. ಎಷ್ಟು ತಿಂಗಳ ಹಿಂದೆ ಪೋಲೀಸರು ಬಂದಿದ್ದರುಎಂದರೆ ಸಾಕ್ಷಿ ಸುಮಾರು 7-8 ತಿಂಗಳ ಹಿಂದೆ ಪೋಲೀಸರು ಬಂದಿದ್ದರು ಎಂದು ಉತ್ತರಿಸುತ್ತಾರೆ. ಈ 7-8 ತಿಂಗಳ ಹಿಂದೆ ಪೋಲೀಸರು ನಮ್ಮ ಮನೆಗೆ ಬರುವ ಮುಂಚೆ ನನಗೆ ಈ ಕೇಸ್ ನ ಬಗ್ಗೆ ತಿಳಿದಿರಲಿಲ್ಲ. ನಿಮ್ಮ ಪ್ರಮಾಣ ಪತ್ರದಲ್ಲಿ ದಿಃ 07.02.2018 ರಲ್ಲಿ ನನಗೆ ನೋಟೀಸ್ ಬಂದಿತ್ತು ಎಂದು ಹೇಳಿ ಬರೆಸಿದ್ದೀರಾ ಎಂದರೆ ಸಾಕ್ಷಿ ಇಲ್ಲ ಆ ರೀತಿ ಏನು ಹೇಳಿ ಬರೆಸಿಲ್ಲ ಎಂದುಉತ್ತರಿಸುತ್ತಾರೆ. ಅಸಲು ದಾವಾ 143/2018 ರದಾವೆಯಲ್ಲಿ ಏನೇನು ಪ್ರಕ್ರಿಯೆಗಳು ನಡೆದಿವೆ ಎಂದು ತಿಳಿಯಲು ಆರ್ಡರ್ ಶೀಟ್ ನ ದೃಢೀಕೃತ ನಕಲನ್ನು ಪಡೆದು ಈ ನ್ಯಾಯಾಲಯದಲ್ಲಿ ಹಾಜರುಪಡಿಸಲು ತೊಂದರೆ ಏನಾದರೂ ಇತ್ತಾ ಎಂದರೆ ಸಾಕ್ಷಿ ಇಲ್ಲ ಎಂದು ಉತ್ತರಿಸುತ್ತಾರೆ. ಅಸಲು ದಾವಾ 143/2018 ದಾವೆಯಲ್ಲಿ ಮನೋಜ್ ಕುಮಾರ್ ರವರು ಯಾವ ದಾಖಲಾತಿಯ ಆಧಾರದ ಮೇಲೆ ಹಾಗೂ ಯಾವ ಕಾರಣದ ಆಧಾರದ ಮೇಲೆ ದಾಖಲಿಸಿದ್ದರುಎಂದು ತಿಳಿದುಕೊಂಡಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎಂದು ಉತ್ತರಿಸುತ್ತಾರೆ. ಪೋಲೀಸರು ನಿಮ್ಮ ಮನೆಯ ಹತ್ತಿರ ಬಂದು ಸಾಮಾನುಗಳನ್ನು ಹೊರಹಾಕುತ್ತೇವೆ ಎಂದು ಹೇಳಿದ ಕೇಸ್ ಯಾವುದುಎಂದು ವಿಚಾರಿಸಿ ತಿಳಿದು ಕೊಂಡಿದ್ದೀರಾ ಎಂದರೆ ಸಾಕ್ಷಿ ಇಲ್ಲ ವಾರೆಂಟ್ ಆಗಿದೆ ಎಂದು ಹೇಳಿದರು ಎಂದುಉತ್ತರಿಸುತ್ತಾರೆ.

4. ಮನೋಜ್ ಕುಮಾರ್ ರವರು ನಿಮ್ಮ ವಿರುದ್ಧ ಯಾವುದಾದರೂ ಕೇಸ್ ಹಾಕಿದ್ದು ಆ ಕೇಸ್ ನಲ್ಲಿ ನೀವು ವಕೀಲರನ್ನು ನೇಮಕ ಮಾಡಿಕೊಂಡಿದ್ದೀರ ಎಂದರೆ ಸಾಕ್ಷಿ ಹೌದು ಮಾಡಿಕೊಂಡಿದ್ದೇನೆ ಎಂದು ಉತ್ತರಿಸುತ್ತಾರೆ. ಎಷ್ಟು ವರ್ಷದ ಹಿಂದೆ ಆ ವಕೀಲರನ್ನು ನೇಮಕ ಮಾಡಿಕೊಂಡಿದ್ದೀರಿ ಎಂದರೆ ಸಾಕ್ಷಿ 2 ವರ್ಷದ ಹಿಂದೆ ಎಂದು ಉತ್ತರಿಸುತ್ತಾರೆ. ನೀವು 2

ವರ್ಷದ ಹಿಂದೆ ಮೇಲೆ ಹೇಳಿದ ರೀತಿ ನೇಮಕ ಮಾಡಿಕೊಳ್ಳುವುದಕ್ಕಿಂತ ಮೊದಲು ಒಂದು ಪ್ರಕರಣದಲ್ಲಿ ನಿಮಗೆ ನ್ಯಾಯಾಲಯದಿಂದ ನೋಟೀಸ್ ಬಂದಿತ್ತು ಎಂದರೆ ಸಾಕ್ಷಿ ನನಗೆ ಯಾವುದೇನೋಟೀಸ್ ಬಂದಿಲ್ಲ ಎಂದು ಉತ್ತರಿಸುತ್ತಾರೆ. ನೀವು ಮನೋಜ್ ಕುಮಾರ್ ಹಾಕಿದ್ದ ಒಂದು ಕೇಸ್ನಲ್ಲಿ ವಕೀಲರನ್ನು ನೇಮಕ ಮಾಡಿಕೊಳ್ಳುವುದಕ್ಕಿಂತ ಮೊದಲೇ ಒಂದು ಸಾರಿ ನೋಟೀಸ್ ಬಂದಿತ್ತು ಎಂದರೆ ಸಾಕ್ಷಿ ಇಲ್ಲ ಯಾವುದೂ ಬಂದಿಲ್ಲ ಎಂದುಉತ್ತರಿಸುತ್ತಾರೆ. ನೀವು ವಕೀಲರನ್ನು ನೇಮಕ ಮಾಡಿಕೊಳ್ಳುವುದಕ್ಕಿಂತ ಹಿಂದೆಯೇ 2 ಬಾರಿ ನ್ಯಾಯಾಲಯದಿಂದನಿಮಗೆ ನೋಟೀಸ್ ಬಂದಿತ್ತು, ಅದನ್ನು ನೀವು ಸ್ವೀಕರಿಸಿದ್ದರೂ ಸಹ ಉದ್ದೇಶಪೂರ್ವಕವಾಗಿಯೇ ನ್ಯಾಯಾಲಯಕ್ಕೆ ಬಂದಿಲ್ಲ ಎಂದರೆ ಸಾಕ್ಷಿ ಸುಳ್ಳು ಯಾವುದೇ ನೋಟೀಸ್ ಬಂದಿಲ್ಲ ಎಂದುಉತ್ತರಿಸುತ್ತಾರೆ.

**ವಿನಂತಿ ಮೇರೆಗೆ ಮುಂದುವರಿದ ಪಾಟೀ ಸವಾಲನ್ನು ಮುಂದೂಡಲಾಯಿತು.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ. ಹೇ.ಕೇ. ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಎಂ.ಎ.ಸಿ.ಟಿ

ಮದ್ದೂರು.